ರಾಜ್ಯದಲ್ಲಿ ವಿದ್ಯುತ್ ಕಳವು ತಪ್ಪಿಸುವ ಬಗ್ಗೆ

574:(4041)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ವಿದ್ಯುತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ವಿದ್ಯುತ್ ಕಳ್ಳತನದಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಎಷ್ಟು ನಷ್ಟವಾಗಿದೆ?

ಆ) ವಿದ್ಯುತ್ ಕಳ್ಳತನದ ಒಟ್ಟು ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ; ಅದರ ಮೌಲ್ಯ ಎಷ್ಟು?

ಇ) ವಿದ್ಯುತ್ ಕಳವು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ವಿದ್ಯುತ್ ಕಳುವಿನ ಪ್ರಮಾಣವು ಪ್ರಸರಣೆ ಮತ್ತು ವಿತರಣೆಯಲ್ಲಿ ಉಂಟಾಗುವ ವಿದ್ಯುತ್ ನಷ್ಟದಲ್ಲಿ ಒಳಗೊಂಡಿರುವುದರಿಂದ ವಿದ್ಯುತ್ ಕಳುವಿನಿಂದ ಮಾತ್ರ ಉಂಟಾಗುವ ವಿದ್ಯುತ್ ನಷ್ಟವನ್ನು ಪ್ರತ್ಯೇಕ ಮಾಡಲು ಸಾಧ್ಯವಿಲ್ಲ. ಮಂಡಳಿಯ ಜಾಗೃತ ದಳ ಮತ್ತು ತಾಂತ್ರಿಕ ಪರಿಶೋಧನ ಘಟಕದವರಿಂದ ಪತ್ತೆ ಹಚ್ಚಲ್ಪಡುವ ಅಪರಾಧಾರ್ಹ ಮತ್ತು ಅಪರಾಧಾರ್ಹವೆಂದು ಗುರುತಿಸಲಾಗದ ಪ್ರಕರಣಗಳಲ್ಲಿ ಕಳ್ಳತನಗೊಂಡ ಅಥವಾ ದುರುಪಯೋಗಗೊಂಡ ವಿದ್ಯುತ್ ಪ್ರಮಾಣವನ್ನು ಲೆಕ್ಕಾಚಾರ ಮಾಡಿ ಇದಕ್ಕೆ ಬಾಕ್ ಬಿಲ್ ಮಾಡಲಾಗುತ್ತದೆ.

ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ (1995-96, 1996-97 ಮತ್ತು 1997-98) ಮಂಡಳಿಯ ಜಾಗೃತ ದಳ ಮತ್ತು ತಾಂತ್ರಿಕ ಪರಿಶೋಧನ ಘಟಕದವರು ಪತ್ತೆ ಮಾಡಿದ ಅಪರಾಧಾರ್ಹ ಮತ್ತು ಅಪರಾಧಾರ್ಹವೆಂದು ಗುರುತಿಸಲಾಗದ ಪ್ರಕರಣಗಳಲ್ಲಿ ಕಳ್ಳತನಗೊಂಡ: ದುರುಪಯೋಗಗೊಂಡ ವಿದ್ಯುತ್ ಪ್ರಮಾಣವನ್ನು ಲೆಕ್ಕಾಚಾರ ಮಾಡಿ ವಿಧಿಸಿದ ದಂಡದ ವಿವರಗಳು ಈ ಕೆಳಕಂಡಂತಿವೆ.

1.	ಅಪರಾಧಾರ್ಹ ಪ್ರಕರಣಗಳು	-ರೂ. 647.5 ಲಕ್ಷ ರೂ.
2.	ಅಪರಾಧಾರ್ಹವೆಂದು ಗುರುತಿಸಲಾಗದ ಪ್ರಕರಣಗಳು	-ರೂ. 3057.5 ಲಕ್ಷ ರೂ.
	ಒಟ್ಟು	3705.0 ಲಕ್ಷ ರೂ.

ಅ) ಕಳೆದ 3 ವರ್ಷಗಳಲ್ಲಿ (1995-96, 1996-97 ಮತ್ತು 1997-98) ಮಂಡಳಿಯ ಜಾಗೃತ ದಳ ಮತ್ತು ತಾಂತ್ರಿಕ ಪರಿಶೋಧನ ಘಟಕದವರು ಪತ್ತೆ ಹಚ್ಚಿದ ವಿದ್ಯುತ್ ಕಳ್ಳತನದ ಮತ್ತು ದುರುಪಯೋಗದ ಪ್ರಕರಣಗಳು ಹಾಗೂ ಕಳ್ಳತನಗೊಂಡ ಮತ್ತು ದುರುಪಯೋಗಗೊಂಡ ವಿದ್ಯುತ್‌ನ ಮೌಲ್ಯದ ವಿವರಗಳು ಈ ಕೆಳಕಂಡಂತಿವೆ.

	ಸಂಖ್ಯೆ	ಮೌಲ್ಯ
1. ಅಪರಾಧಾರ್ಹ ಪ್ರಕರಣಗಳು	545	647.5 ಲಕ್ಷ ರೂ.
2. ಅಪರಾಧಾರ್ಹವೆಂದು ಪರಿಗಣಿಸಲಾಗದ ಪ್ರಕರಣಗಳು	11241	3057.5 ಲಕ್ಷ ರೂ.
ಒಟ್ಟು	11786	3705.0 ಲಕ್ಷ ರೂ.

ಇ) ವಿದ್ಯುತ್ ಕಳ್ಳತನ ಮತ್ತು ದುರುಪಯೋಗಗಳನ್ನು ತಡೆಗಟ್ಟಲು ಮುಖ್ಯವಾಗಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಮಂಡಳಿಯ ಜಾಗೃತದಳ ಮತ್ತು ತಾಂತ್ರಿಕ ಪರಿಶೋಧನಾ ಘಟಕವು ವಿದ್ಯುತ್ ಗ್ರಾಹಕರ ಆವರಣಗಳಲ್ಲಿ ಅನಿರೀಕ್ಷಿತ ತನಿಖೆಗಳನ್ನು ತೀವ್ರಗೊಳಿಸಿದೆ. ಅನಿರೀಕ್ಷಿತ ತನಿಖೆ: ದಾಳಿಗಳನ್ನು ತೀವ್ರ ರೀತಿಯಲ್ಲಿ ಕೈಗೊಳ್ಳುವ ಸಲುವಾಗಿ ಜಾಗೃತ ದಳ ಮತ್ತು ತಾಂತ್ರಿಕ ಪರಿಶೋಧನ ಘಟಕಗಳನ್ನು ಬಲಪಡಿಸಲಾಗಿದ್ದು ಹೆಚ್ಚಿನ ವಾಹನ ಸೌಲಭ್ಯಗಳನ್ನು ಸಹ ನೀಡಲಾಗಿದೆ.

2. ಎಲ್ಲಾ ಹೆಚ್.ಟಿ.ಕೈಗಾರಿಕೆಗಳಿಗೆ ಟ್ಯಾಂಟರ್ ಪ್ರೂಪ್ ಮತ್ತು ಹೆಚ್ಚು ನಿಖರತೆಯ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸಲಾಗಿದೆ. ಎಲ್.ಟಿ.ಕೈಗಾರಿಕೆಗಳ ಸ್ಥಾವರಗಳಿಗೆ ಎಲೆಕ್ಟ್ರಾನಿಕ್ ಮೀಟರ್‌ಗಳನ್ನು ಅಳವಡಿಸುವ ಕಾರ್ಯಪ್ರಗತಿಯಲ್ಲಿದೆ.

3. 40 ಹೆಚ್.ಪಿ.ಗೂ ಮೇಲ್ಪಟ್ಟು ಎಲ್.ಟಿ. ಕೈಗಾರಿಕೆ ಸ್ಥಾವರಗಳಿಗೆ ಟ್ಯಾಂಪರ್ ಪ್ರೂಫ್ ಬ್ಯಾಕ್ಸ್‌ಗಳನ್ನು ಅಳವಡಿಸಲಾಗುತ್ತದೆ.

4. ಹೆಚ್ಚು ವಿದ್ಯುತ್ ಬಳಕೆ ಮಾಡುವ ವಿದ್ಯುತ್ ಸ್ಥಾವರಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಅನುಮಾನ ಬಂದ ಸ್ಥಾವರಗಳನ್ನು ಕೂಡಲೇ ಪರೀಕ್ಷಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

5. ಏಪ್ರಿಲ್ 97 ರಿಂದ ಮಂಡಳಿಯ ಜಾಗೃತ ದಳದ ಘಟಕಗಳನ್ನು ಪೋಲೀಸ್ ಠಾಣೆಗಳೆಂದು ಘೋಷಿಸಿದ್ದು, ಮಂಡಳಿಯ ಪೋಲೀಸ್ ಅಧಿಕಾರಿಗಳೇ

ಕೇಸು ದಾಖಲಿಸಿ ತನಿಖೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

6. ಜಾಗೃತ ದಳವು ಹೆಚ್ಚು ಹೆಚ್ಚು ಪ್ರಕರಣಗಳನ್ನು ಪತ್ತೆ ಹಚ್ಚುವಂತೆ ಪ್ರೋತ್ಸಾಹಿಸಲು ಆಕರ್ಷಕ ಬಹುಮಾನಗಳನ್ನು ಘೋಷಿಸಲಾಗಿದೆ.

ನಗರ ಪ್ರದೇಶ ಹಾಗೂ ಗ್ರಾಮಾಂತರ ಪಡಿತರ ವ್ಯವಸ್ಥೆಯಲ್ಲಿರುವ ಮೂರು ಹಂತದ ಪಡಿತರ ವಿತರಣೆ.

575:(4088)

ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಮೂರು ಹಂತದ ಪಡಿತರ ವಿತರಣೆ ವ್ಯವಸ್ಥೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಹುತೇಕ ನಗರ ಪ್ರದೇಶದ ಜನತೆಗೆ ಅಥವಾ ಗ್ರಾಮಗಳು ಗ್ರಾಮೀಣ ಪಡಿತರ ವ್ಯವಸ್ಥೆ ಮುಂದುವರೆದಿರುವುದು ಸರ್ಕಾರ ಗಮನಿಸಿದೆಯೇ?

ಇ) ಈ ತಾರತಮ್ಯ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು.

ಆ) ಬಹುಮಟ್ಟಿಗೆ ಅನೌಪಚಾರಿಕ ಪಡಿತರ ಪ್ರದೇಶ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶ ಎಂಬ ವಿಂಗಡಣೆಗಳಲ್ಲಿ ಪಡಿತರವನ್ನು ನೀಡಲಾಗುತ್ತಿದೆ.

ಇ) ಕಾರ್ಡುಗಳಿಗೆ ಅಕ್ಕಿ ಮತ್ತು ಗೋದಿಯ ವಿತರಣಾ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಸಕ್ಕರೆ ಮತ್ತು ಸೀಮೆಎಣ್ಣೆ ವಿತರಣೆಯ ಪ್ರಮಾಣದಲ್ಲಿ ಗ್ರಾಮಾಂತರ ಮತ್ತು ನಗರ ಜನತೆಯ ಜೀವನ ಶೈಲಿ ತಿಂಡಿ ತಿನಿಸುಗಳನ್ನು ಉಪಯೋಗಿಸುವ ಹಿನ್ನೆಲೆಯ ದೃಷ್ಟಿಯನ್ನಿಟ್ಟುಕೊಂಡು ಸ್ವಲ್ಪ ಮಟ್ಟಿನ ವ್ಯತ್ಯಾಸವಿರುತ್ತದೆ. ಈ ತಾರತಮ್ಯವನ್ನು ಹೋಗಲಾಡಿಸಲು ರಾಜ್ಯ ಸರ್ಕಾರವು ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ, ಸೀಮೆಎಣ್ಣೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಲೇ ಇದೆ. ಇದನ್ನು ಹೋಗಲಾಡಿಸಲು 75,000 ಕಿಲೋ ಲೀಟರ್ ಸೀಮೆಎಣ್ಣೆ ಮತ್ತು 33,770 ಮೆ.ಟನ ಸಕ್ಕರೆ ಅವಶ್ಯಕತೆ ಇದ್ದು, ಈಗ 19, 140 ಮೆ.ಟನ್